ಫ್ಯಾಕ್ಸ್ / Fax : 080-25586321
ಈಮೇಲ್ / E-mail : ho@kspcb.gov.in
ವೆಬ್‌ಸೈಟ್ / Website : http://kspcb.gov.in

25581383, 25589112
25588151, 25588270
25588142, 25586520

# ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
# Karnataka State Pollution Control Board

"ಪರಿಸರಭವನ", 1 ರಿಂದ 5ನೇ ಮಹಡಿಗಳು, ನಂ.49, ಚರ್ಚ್ ಸ್ಟ್ರೀಟ್, ಬೆಂಗಳೂರು - 560 001, ಕರ್ನಾಟಕ, ಭಾರತ
"Parisara Bhavana", 1st to 5th Floor, # 49, Church Street, Bengaluru - 560 001, Karnataka, INDIA

ಸಂಖ್ಯೆ: ಮಾನಿಮ 01 ಮಾಹಿತಿ 2013/ 123 ದಿನಾಂಕ: 29 APR 2023

## ಅಧಿಸೂಚನೆ

**ವಿಷಯ:** ಮಂಡಳಿಯ ಅಧ್ಯಕ್ಷರ, ಸದಸ್ಯ ಕಾರ್ಯದರ್ಶಿಯವರ ಮತ್ತು ಆಡಳಿತ ವಿಭಾಗಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಮೊದಲನೇ ಮೇಲ್ಮನವಿ ಪ್ರಾಧಿಕಾರಿಯನ್ನು ನೇಮಿಸುವ ಬಗ್ಗೆ.

ಉಲ್ಲೇಖ:ಮಂಡಳಿಯ ಅಧಿಸೂಚನೆ ಸಂಖ್ಯೆ:ಮಾನಿಮ 01 ಮಾಹಿತಿ 2013/2096, ದಿನಾಂಕ: 20.01.2023.

*****

ಮಾಹಿತಿ ಹಕ್ಕು ಅಧಿನಿಯಮ 2005ರ ನಿಯಮ 5(1) ಮತ್ತು 5(2) ರ ಅಡಿಯಲ್ಲಿ ಮಂಡಳಿಯ ಅಧ್ಯಕ್ಷರ ವಿಭಾಗ, ಸದಸ್ಯ ಕಾರ್ಯದರ್ಶಿಯವರ ವಿಭಾಗ ಮತ್ತು ಆಡಳಿತ ವಿಭಾಗಕ್ಕೆ ಸಂಬಂಧಿಸಿದಂತೆ, ಶ್ರೀಮತಿ ಅನಿತಾಲಕ್ಷ್ಮೀ, ಕೆ.ಎ.ಎಸ್.(ಆಯ್ಕೆ ಶ್ರೇಣಿ) ಮುಖ್ಯ ಆಡಳಿತಾಧಿಕಾರಿ ಇವರನ್ನು ಸಾರ್ವಜನಿಕ ಮಾಹಿತಿ ಅಧಿಕಾರಿಯನ್ನಾಗಿ ಹಾಗೂ ಮಾಹಿತಿ ಹಕ್ಕು ಅಧಿನಿಯಮ 2005ರ ನಿಯಮ 19(1) ರ ಅಡಿಯಲ್ಲಿ ಶ್ರೀ ಶ್ರೀನಿವಾಸುಲು, ಭಾ.ಅ.ಸೇ. ಸದಸ್ಯ ಕಾರ್ಯದರ್ಶಿ ಇವರನ್ನು ಮೊದಲನೇ ಮೇಲ್ಮನವಿ ಪ್ರಾಧಿಕಾರಿಯಾನ್ನಾಗಿ ಉಲ್ಲೇಖಿತ ಅಧಿಸೂಚನೆಯಲ್ಲಿ ನಾಮನಿರ್ದೇಶನ ಮಾಡಲಾಗಿತ್ತು.

ಪ್ರಸ್ತುತ ಶ್ರೀ ಗಿರೀಶ್, ಹೆಚ್.ಸಿ., ಭಾ.ಅ.ಸೇ. ರವರು ಮಂಡಳಿಯಲ್ಲಿ ದಿನಾಂಕ:02.03.2023ರ ಅಪರಾಹ್ನ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯಭಾರವನ್ನು ವಹಿಸಿಕೊಂಡಿರುತ್ತಾರೆ ಹಾಗೂ ಶ್ರೀ ಬಿ.ಟಿ.ಕುಮಾರ ಸ್ವಾಮಿ, ಕೆ.ಎ.ಎಸ್.(ಹಿರಿಯ ಶ್ರೇಣಿ) ರವರು ಮಂಡಳಿಯಲ್ಲಿ ದಿನಾಂಕ: 06.03.2023ರ ಪೂರ್ವಾಹ್ನ ಆಡಳಿತಾಧಿಕಾರಿ ಹುದ್ದೆಯ ಕಾರ್ಯಭಾರವನ್ನು ವಹಿಸಿಕೊಂಡಿರುತ್ತಾರೆ.

ಆದ್ದರಿಂದ, ಮಾಹಿತಿ ಹಕ್ಕು ಅಧಿನಿಯಮ 2005ರ ನಿಯಮ 5(1) ಮತ್ತು 5(2) ಅಡಿಯಲ್ಲಿ ಮಂಡಳಿಯ ಅಧ್ಯಕ್ಷರ ವಿಭಾಗ, ಸದಸ್ಯ ಕಾರ್ಯದರ್ಶಿಯವರ ವಿಭಾಗ ಮತ್ತು ಆಡಳಿತ ವಿಭಾಗಕ್ಕೆ ಸಂಬಂಧಿಸಿದಂತೆ, ಶ್ರೀ ಬಿ.ಟಿ.ಕುಮಾರ ಸ್ವಾಮಿ, ಕೆ.ಎ.ಎಸ್.(ಹಿರಿಯ ಶ್ರೇಣಿ) ಆಡಳಿತಾಧಿಕಾರಿರವರನ್ನು ಸಾರ್ವಜನಿಕ ಮಾಹಿತಿ ಅಧಿಕಾರಿಯನ್ನಾಗಿ ಹಾಗೂ ಮಾಹಿತಿ ಹಕ್ಕು ಅಧಿನಿಯಮ 2005ರ ನಿಯಮ 19(1) ರ ಅಡಿಯಲ್ಲಿ ಶ್ರೀ ಗಿರೀಶ್, ಹೆಚ್.ಸಿ., ಭಾ.ಅ.ಸೇ. ಸದಸ್ಯ ಕಾರ್ಯದರ್ಶಿ ರವರನ್ನು ಮೊದಲನೇ ಮೇಲ್ಮನವಿ ಪ್ರಾಧಿಕಾರಿಯಾನ್ನಾಗಿ ನಾಮನಿರ್ದೇಶನ ಮಾಡಲಾಗಿದೆ.

29/04/2023

(ಡಾ. ಶಾಂತ್ ಎ. ತಿಮ್ಮಯ್ಯ)
ಸಾರ್ವಜನಿಕ ಪ್ರಾಧಿಕಾರ ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

15/03/2023

ಪ್ರತಿಗಳು:

1. ಸದಸ್ಯ ಕಾರ್ಯದರ್ಶಿಯವರ ಗಮನಕ್ಕೆ ತರಲು ಆಪ್ತ ಸಹಾಯಕರಿಗೆ ಸಲ್ಲಿಸಲಾಗಿದೆ.
2. ಮುಖ್ಯ ಪರಿಸರ ಅಧಿಕಾರಿಯವರ ಮಾಹಿತಿಗಾಗಿ
3. ಮುಖ್ಯ ವೈಜ್ಞಾನಿಕ ಅಧಿಕಾರಿಗಳ ಮಾಹಿತಿಗಾಗಿ
4. ಹಿರಿಯ ಪರಿಸರ ಅಧಿಕಾರಿಗಳು/ಪರಿಸರ ಅಧಿಕಾರಿಗಳು ಕೇಂದ್ರ ಕಛೇರಿ ಇವರ ಮಾಹಿತಿಗಾಗಿ
5. ಮುಖ್ಯ ಹಣಕಾಸು ಅಧಿಕಾರಿಯವರ ಮಾಹಿತಿಗಾಗಿ
6. ಎಲ್ಲಾ ಪ್ರಾದೇಶಿಕ ಕಛೇರಿಗಳ ಅಧಿಕಾರಿಗಳ ಮಾಹಿತಿಗಾಗಿ
7. ನಿಗಮಿತ ಕೋಶ(ವೆಬ್ ಸೈಟ್‌ನಲ್ಲಿ ಪ್ರಕಟಿಸಲು)/ ಸಂಬಂಧಪಟ್ಟ ಶಾಖೆಗೆ
8. ಹೆಚ್ಚುವರಿ ಪ್ರತಿ
9. ಸೂಚನಾ ಫಲಕಕ್ಕೆ